ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಆಗಬಾರದು. ಆ ರೀತಿ ಮುಂದೆ ಆಗದ ಹಾಗೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನೋಡಿಕೊಳ್ಳುತ್ತೇವೆ.

ಶ್ರೀ ರೇವುನಾಯಕ್ ಬೆಳಮಗಿ : ನನ್ನ ಕ್ಷೇತ್ರವಾದ ಆಳಂದ ತಾಲ್ಲೂಕಿನ ನರೋಣ ಗ್ರಾಮದಲ್ಲಿ ಆಹಾರದಲ್ಲಿ ಒಂದು ಹಲ್ಲಿ ಬಿದ್ದಿತ್ತು. ಇದು ನಿರ್ಲಕ್ಷದಿಂದಾಗಿತ್ತು. ಒಬ್ಬ ಹುಡುಗ ಹಲ್ಲಿ ಬಿದ್ದಿದ್ದನ್ನು ತೋರಿಸಿದ್ದರಿಂದ 80ಕ್ಕಿಂತ ಹೆಚ್ಚು ಹುಡುಗರು ವಾಂತ ಭೇದಿ ಮಾಡಿಕೊಂಡು ದವಾಖಾನೆಗೆ ಹೋದರು, ಅಲ್ಲಿಗೆ ಡಿಸಿ, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳೂ ಬಂದಿದ್ದರು. ಚೌಕಾಶಿ ಮಾಡಿದಾಗ ಸರಿಯಾಗಿ ವ್ಯವಸ್ಥೆ ಮಾಡದಿರುವ ಕಾರಣ ಹಲ್ಲಿ ಬಿದ್ದಿತ್ತು. ಅದರಿಂದ ಎಲ್ಲರೂ ದವಾಖಾನೆಗೆ ಹೋಗಿದ್ದಾರೆಂಬುದು ತಿಳಿಯಿತು. ಈ ಘಟನೆ ನಮ್ಮಲ್ಲಿ ನಡೆದಿದೆ.

ಉಪಾಧ್ಯಕ್ಷರು : ಅವೆಲ್ಲಾ ಆಕಸ್ಮಿಕಗಳು.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಸೋಮವಾರಕ್ಕೆ ಮುಂದೂಡಿದರೆ ಒಳ್ಳೆಯದು. ಇನ್ನೂ ಸುಮಾರು ಹೊತ್ತು ಆಗುತ್ತದೆ. ಇಲ್ಲಿ ಮಧ್ಯಾಹ್ನದ ಬಿಸಿ ಊಟವನ್ನು ನಮಗೆ ಯಾರೂ ಹಾಕುವುದಿಲ್ಲ.

(ಗೊಂದಲ)

5. ಪ್ರಕಟಣೆಗಳು

ಉಪಾಧ್ಯಕ್ಷರು : ದಿ: 10.7.03ರ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 12 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 57 ಪ್ರಶ್ನೆಗಳ ಪೈಕಿ 44 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ** (ಅನುಬಂಧ II)

ಪ್ರಕಟಣೆ (i)

ಸದನದಲ್ಲಿ ಉತ್ತರಿಸುವ ಹಾಗೂ ಚುಕ್ಕೆರಹಿತ ಗುರುತಿನ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುವುದು

ಪ್ರಕಟಣೆ (ii)

ದಿನಾಂಕ 9ನೇ ಜುಲೈ, 2003ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆಯಲ್ಲಿ ವಿಧಾನಸಭೆಯು ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 10ನೇ ಜುಲೈ, 2003 ರಿಂದ ಪ್ರತಿದಿನ ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರಿ ಸಾಯಂಕಾಲ 6.00 ಗಂಟೆಯವರೆಗೆ ಕಾರ್ಯಕಲಾಪಗಳು ನಡೆಯಲಿದೆ.
2. ಪ್ರತಿದಿನ ಮಧ್ಯಾಹ್ನ 1.30 ರಿಂದ 2.30ರ ವರೆಗೆ ಊಟದ ವಿರಾಮ.
3. ದಿನಾಂಕ 28ನೇ ಜುಲೈ, 2003ರಂದು 2003–2004ನೇ ಸಾಲಿನ, ಮುಖ್ಯಮಂತ್ರಿಯವರಿಗೆ ಸಂಬಂಧಿಸಿದ ಇಲಾಖೆಯ ಅಭಿಯಾಚನೆಗಳ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.
4. ಈ ಮಧ್ಯೆ ಆಧ್ಯಾದೇಶಗಳಿಗೆ ಸಂಬಂಧಿಸಿದ ಅತೀ ಜರೂರು ವಿಧೇಯಕಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ.

ಈಗ ಸದನವನ್ನು 14.07.03ರ ಬೆಳಿಗ್ಗೆ 11 ಘಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಘಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 14.7.03 ರಂದು ಸೋಮವಾರ ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು).

6. ಅನುಬಂಧ – I

ರಾಜ್ಯದ ಅಡಿಕೆ ಬೆಳೆಗಾರರಿಗೆ ಸರ್ಕಾರದ ನೆರವು

2320(2867) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಹೆಕ್ಟೇರು ಪ್ರದೇಶದಲ್ಲಿ ಅಡಿಕೆ ಬೆಳೆ ಬೆಳೆಯಲಾಗುತ್ತಿದೆ (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಅಡಿಕೆ ಧಾರಣೆ ಕುಸಿದಿರುವುದು ನಿಜವೇ; ಧಾರಣೆ ಕುಸಿಯಲು ಕಾರಣಗಳೇನು;

ಇ) ಅಡಿಕೆ ಬೆಳೆಗಾರರಿಗೆ ರಾಜ್ಯ ಸರ್ಕಾರ ಕಲ್ಪಿಸುತ್ತಿರುವ ಸೌಲಭ್ಯಗಳೇನು;

ಈ) ಅಡಿಕೆಗೆ ರಾಜ್ಯ ಸರ್ಕಾರ ಬೆಂಬಲ ಬೆಲೆ ಘೋಷಣೆ ಮಾಡಿದೆಯೇ; ಸರ್ಕಾರ ಈ ವಿಷಯದಲ್ಲಿ ಮಾರುಕಟ್ಟೆ ಮಧ್ಯೆ ಪ್ರವೇಶಿಸಿದೆಯೇ

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಸುಮಾರು 1.32 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಸಲಾಗುತ್ತಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಹೌದು. ಆದರೆ ಮೇ ತಿಂಗಳ 2ನೇ ವಾರದಿಂದ ಚೇತರಿಕೆ ಕಂಡು ಬಂದಿದೆ.

ಅಡಿಕೆ ಉತ್ಪಾದನೆಯ ಹೆಚ್ಚಳ ಮತ್ತು ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಗುಟ್ಕಾ ನಿಷೇಧಿಸಿ ಬಳಕೆ ಕಡಿಮೆ ಆಗಿರುವುದರಿಂದ ಧಾರಣೆ ಕುಸಿಯಲು ಕಾರಣವಾಗಿದೆಯೆಂದು ತಿಳಿದುಬಂದಿದೆ.

ಇ) 1. ಬೆಲೆಕುಸಿತದ ಸಂದರ್ಭಗಳಲ್ಲಿ ಹೊಸ ಚಾಲಿ ಅಡಿಕೆಯನ್ನು ಸರ್ಕಾರವು ಮಾರುಕಟ್ಟೆ ಮಧ್ಯೆ ಪ್ರವೇಶ ಯೋಜನೆಯಡಿ ಬೆಂಬಲ ಬೆಲೆ ನೀಡಿ ಖರೀದಿಸಲಾಗಿದೆ.

2. ಅಡಿಕೆ ಬೆಳೆಗಾರರಿಗೆ ಬೇಸಾಯ ಕ್ರಮಗಳ ಬಗ್ಗೆ ತಾಂತ್ರಿಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.

3. ಅಡಿಕೆ ಬೆಳೆಗಾರರಿಗೆ ಜಿಲ್ಲಾ ಪಂಚಾಯತ್‌ಗಳ ಮೂಲಕ ಶೇ.50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸಲಾಗುತ್ತಿದೆ.

4. ಅಡಿಕೆ ಬೆಳೆಗಾರರ ಆದಾಯ ಹೆಚ್ಚಿಸುವ ದೃಷ್ಟಿಯಿಂದ ಅಂತರ ಬೆಳೆಗಾಗಿ ಕಾಳುಮೆಣಸು, ವೆನಿಲ್ಲಾ, ಕೋಕೊ ಮತ್ತು ಇತರೆ ಬೆಳೆಗಳನ್ನು ಬೆಳಸಲು ಪ್ರೋತ್ಸಾಹ ನೀಡಲಾಗುತ್ತಿದೆ.

5. ಅಡಿಕೆಯ ಉತ್ಪನ್ನಗಳ ಪರ್ಯಾಯ ಬಳಕೆಯನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಸಂಶೋಧನೆ ಮಾಡಲು ಸಂಶೋಧನಾ ಸಂಸ್ಥೆಗಳಿಗೆ ಹಣಕಾಸಿನ ನೆರವು ಒದಗಿಸಲಾಗಿದೆ.

6. ಅಡಿಕೆ ಆಮದು ನಿಯಂತ್ರಣ ಕ್ರಮಗಳ ಬಗ್ಗೆ ಭಾರತ ಸರ್ಕಾರಕ್ಕೆ ಒತ್ತಾಯಿಸಲಾಗಿದೆ.